


### ಪೋಷಕ, ಶಿಕ್ಷಕರಿಗೆ ಮಾರ್ಗದರ್ಶಿ

'ಮಕ್ಕಳೇಕೆ ಸುಳ್ಳು ಹೇಳುತ್ತಾರೆ?' ಡಾ.ಅ.ಶ್ರೀಧರ ಅವರ ಲೇಖನ ಪೋಷಕರಿಗೆ ಹಾಗೂ ಶಿಕ್ಷಕರಿಗೆ ಮಾರ್ಗದರ್ಶಕವಾಗಿದೆ.

- ಸು.ವಿಜಯಲಕ್ಷ್ಮಿ, ಶಿವಮೊಗ್ಗ/ಕೆ.ಎಸ್.ಚಂದ್ರ, ಕೌಡ್ಲೆ/ ಪಿ.ಗೋವಿಂದರಾಜ್, ಶಿವಮೊಗ್ಗ

### ಮಕ್ಕಳ ಕುರಿತ ಕಬ್ಬಿಣದ ಕಡಲೆ

ಮಕ್ಕಳೇಕೆ ಸುಳ್ಳು ಹೇಳುತ್ತಾರೆ ಲೇಖನದಲ್ಲಿ ಕೊನೆಯಲ್ಲಿ ಕೊಟ್ಟಿರುವ ಪಟ್ಟಿ ಉಪಯುಕ್ತವಾಗಿದೆ. ಆದರೆ ಇಡೀ ಲೇಖನ ವಿಶ್ವವಿದ್ಯಾಲಯದಲ್ಲಿ ಮಂಡಿಸುವ ಪ್ರಬಂಧದಂತೆ ಕಬ್ಬಿಣದ ಕಡಲೆ ಆಗಿದೆ.

-ಸುಪ್ರಿಯಾ, ಹೊಳಗುಂದಿ

### ಗರವಿಷ ಪ್ರಾಶನ ಸತ್ಯವಲ್ಲ, ಮಿಥ್ಯ!

ಗರವಿಷ ಪ್ರಾಶನ: ಸತ್ಯವೋ... ಮಿಥ್ಯವೋ? ಎಂದೇ ಯಾವುದೇ ಖಚಿತ ನಿಲುವಿಗೆ ಬಾರದಂತೆ ಜಯಂತ ಪಡುಬಿದ್ರಿಯವರು ಬರೆದಿದ್ದಾರೆ. ಆದರೆ ಇದು ನೂರಕ್ಕೆ ನೂರು ಮಿಥ್ಯ. ಲೇಖನದಲ್ಲಿ ಒಂದು ಕಡೆ ಹಲವು ವಸ್ತುಗಳೊಂದಿಗೆ ಓತಿಕ್ಯಾತದ ಎಣ್ಣೆ ಬೆರೆಸಿ ಮದ್ದು ತಯಾರಿಸುತ್ತಾರೆ ಎಂದಿದೆ. ಆದರೆ ಗೋಸುಂಬೆ (ಊಸರವಳ್ಳಿ)ಯದ್ದು ಅದು.

ತನಗೆ ಮದ್ದು ಹಾಕಿದ್ದಾರೆ ಎಂದು ನಂಬಿರುವ ರೋಗಿ ಮಾನಸಿಕವಾಗಿ, ದೈಹಿಕವಾಗಿ ಜರ್ಜರಿತನಾಗಿರುತ್ತಾನೆ. ಅಲೋಪತಿ ಸೇರಿದಂತೆ ಬೇರ್‍ಯಾವ ಚಿಕಿತ್ಸೆ ಕೊಡಿಸಿದರೂ ಅದಕ್ಕೆ ಆತ ಸ್ಪಂದಿಸುವುದಿಲ್ಲ. ಆದರೆ ಒಂದು ದಿನ ಮದ್ದು ತೆಗೆಯುವ ನಾಟಿ ವೈದ್ಯರಲ್ಲಿ ಕರೆದುಕೊಂಡು ಹೋದರೆ ಸಾಕು. ಮೊದಲಿನಂತೆ ಆರೋಗ್ಯವಂತನಾಗಿ ಬಿಡುತ್ತಾನೆ!

-ಏಕನಾಥ ಬೊಂಗಾಳೆ, ಕಮ್ಮಟ್ಟಿ

### ಅಡ್ಡ ಗೋಡೆ ಮೇಲೆ ದೀಪ

ಮದ್ದು ಇಡುವುದು ಹಳ್ಳಿಗಳಲ್ಲಿ ಬಹಳ ನಡೆಯುತ್ತದೆ. ಈ ಮದ್ದು ತೆಗೆಯುವ ನಾಟಿ ವೈದ್ಯರೂ ಇದ್ದಾರೆ. ಆದರೆ ಲೇಖಕರು ಗರವಿಷ ಪ್ರಾಶನ ಸತ್ಯ ಎಷ್ಟು? ಮಿಥ್ಯ ಎಷ್ಟು? ಎಂದು ಅಡ್ಡಗೋಡೆ ಮೇಲೆ ದೀಪ ಇಟ್ಟ ಹಾಗೆ ಬರೆದಿದ್ದಾರೆ!

- ಮೊಳಕಾಲ್ಮುರು ಸುರೇಶ, ಬಳ್ಳಾರಿ

### ಬೇಷ್ ತೇಜು

ಮಹಮ್ಮದ್ ನೂಮಾನ್‌ರ 'ತೇಜು ಗುರಿ ತಪ್ಪಲಿಲ್ಲ' ಲೇಖನ ಓದಿ ಸಂತೋಷ ಮತ್ತು ಹೆಮ್ಮೆಯಾಯಿತು.

-ಎಂ. ಸರ್ದಾರ್, ಅರಸೀಕೆರೆ

### ಸಾಂಝಿ ಸ್ವಾರಸ್ಯಕರ

ಎಂ.ಜಿ.ನಂಜೇಗೌಡರ 'ಹುಸೇನಿಯ ಸಾಂಝಿ' ಲೇಖನ ಸ್ವಾರಸ್ಯಕರವಾಗಿತ್ತು.

- ರವೀಂದ್ರನಾಥ ಯಡಹಳ್ಳಿ, ಬೀಳಗಿ

### ತಾಯ್ತನದ ತುಮುಲದ ಸಮರ್ಥ ಕಥೆ

'ಹೂವೊಂದು ಬೇಕು ಬಳ್ಳಿಗೆ' ಪಾರ್ವತಿ ಪಿಟಗಿಯವರ ಕಥೆ ತಾಯ್ತನದ ಬಗ್ಗೆ ಹೆಣ್ಣಿನ ತುಮುಲಗಳನ್ನು ಕಲಾತ್ಮಕವಾಗಿ ಕಟ್ಟಿಕೊಟ್ಟಿದೆ. ಬೆಳಗಾವಿ ಭಾಗದ ಆಡುಭಾಷೆಯ ಅತ್ಯುತ್ತಮ ನಿರೂಪಣೆ. ಕಥೆ ಓದಿ ಮನಸ್ಸಿಗೆ ಬಾಳ ಸಂತೋಷ ಆತ್ರಿ.

- ಬಿ.ಎಸ್.ಮುಳ್ಳೂರ, ಹಲಗತ್ತಿ/ ನೆ.ಲ.ರಾಂ, ಸಿ.ಎಂ.ಕುಂದಗೋಳ, ಬೆಂಗಳೂರು

### ಅಚ್ಚರಿಯ ಅಂತ್ಯ!

'ಹೂವೊಂದು ಬೇಕು ಬಳ್ಳಿಗೆ' ಕಥೆಯ ಅಂತ್ಯ ಅಚ್ಚರಿ ಮೂಡಿಸಿತು. ಮಕ್ಕಳಿಲ್ಲದ ತಾಯಿಯು ದಾಯಾದಿಗಳ, ಸಹೋದರಿಯರ ಅಥವಾ ಬಡವರ ಮಕ್ಕಳನ್ನು ದತ್ತು ಪಡೆಯಬಹುದಿತ್ತು. ಸೋದರ ಮಾವನಿಂದ ನಿಯೋಗ ಪದ್ಧತಿಯಂತೆ ಮಗು ಪಡೆಯುವುದನ್ನು ಸಮಾಜ ಒಪ್ಪೀತೇ?

- ಎಚ್.ಎಂ.ಕಾಳಮ್ಮ, ಬಸರಕೋಡು/ ಬಿ.ಲಕ್ಷ್ಮಿನಾರಾಯಣ, ಚಿತ್ರದುರ್ಗ

### ಹಳೆಯ ಕಥೆ ನೆನಪು, ಆದರೆ ಕುತೂಹಲ

ಹತ್ತು ಹದಿನೈದು ವರ್ಷಗಳ ಹಿಂದೆ ಸುಧಾದಲ್ಲಿ ಇದೇ ಕಥಾ ವಸ್ತುವನ್ನಾಧರಿಸಿದ 'ಕುಂತಿ' ಅಥವಾ 'ನಾನು ಕುಂತಿ' ಎಂಬ ಮಾವನಿಂದ ಸಂತಾನ ಪ್ರಾಪ್ತಿ ವಸ್ತುವಿನ ಕಥೆ ಪ್ರಕಟವಾಗಿತ್ತು. ಆದರೆ ಇಲ್ಲೊಂದು ವಿಶಿಷ್ಟ ವ್ಯತ್ಯಾಸವಿದೆ. ಈ ಕಥೆ ಕೊನೆಯವರೆಗೂ ಕುತೂಹಲ ಕಾಯ್ದುಕೊಂಡು ಹೋಯಿತು.

- ಗೋಪಾಲ ಆಶ್ರಿತ, ಬೆಂಗಳೂರು

### ನೆನಪುಗಳೆಂದರೆ ಹೀಗೆ...

'ಕೊನೆಗೂ ನಿದ್ದೆ ಮಾಡಿದರು ಕಿ.ರಂ.' ಸತ್ಯಮೂರ್ತಿ ಆನಂದೂರರ ಲೇಖನ ಕಿ.ರಂ.ನಾಗರಾಜರ ವ್ಯಕ್ತಿತ್ವ ಪ್ರತಿಬಿಂಬಿಸುವಂತಿತ್ತು.

-ನಾಗರಾಜ ಬಣಕಾರ, ಕೊಟ್ಟೂರು/ ನಾ.ವೆ.ಮುರ್ಥಿ, ನಾಗವಾರ

### ಕಾಫಿ ಅಪಾಯ ಅಲ್ಲ!

ನಾಗರಾಜ ಹೆಗಡೆಯವರ 'ಕೆಫಿನ್ ಮಿಥ್ಯ-ಸತ್ಯ' ಓದಿ ಕಾಫಿಯಿಂದ ಹೃದಯ ಕಾಯಿಲೆ, ಕ್ಯಾನ್ಸರ್ ಬರುವುದಿಲ್ಲ ಎಂದು ತಿಳಿದು ಮನಸ್ಸು ನಿರಾಳವಾಯಿತು! ಇಂತಹ ಲೇಖನಗಳನ್ನು ಹೆಚ್ಚು ಪ್ರಕಟಿಸಿರಿ!

-ತರಂಗಿಣಿ, ತುಮಕೂರು/ ರಾಜೇಂದ್ರ ಕುಮಾರ್, ದೊಡ್ಡಬಳ್ಳಾಪುರ

### ತಪ್ಪು ಕಲ್ಪನೆ

'...ಶಕುನಿಯ ಹೋಲಿಕೆ ಸಲ್ಲ' (ಕೊಹಿಮ: ಸಮುದ್ರಮಥನ) ಸಾಮಾನ್ಯವಾಗಿ ಶಕುನಿಯ ಬಗೆಗೆ ತಪ್ಪು ಕಲ್ಪನೆಯಿದೆ. ಆದರೆ ಅವನು ಮೂಲತಃ ಕೆಟ್ಟವನಲ್ಲ. ('ದುಷ್ಟ ಚತುಷ್ಟಯ'ದಲ್ಲಿ ಒಬ್ಬನಲ್ಲ!) ಕೌರವನಿಗೆ ಅವನು ಮೊದಲು ಬುದ್ಧಿ ಹೇಳುತ್ತಾನೆ; ಕೇಳದಿದ್ದ ಮೇಲೆ ಸಹಕರಿಸುತ್ತಾನೆ. (ರಾಮಾಯಣದ ಮಾರೀಚನೂ ಅಷ್ಟೆ.)

-ಸಿಪಿಕೆ, ಮೈಸೂರು

### ಕಾಯಕವೇ ಕೈಲಾಸ

ವಿಚಾರ ಲಹರಿಯಲ್ಲಿ ಶಿಕಾಕುರ 'ಸರ್ಕಾರದ ಕೆಲಸ ದೇವರ ಕೆಲಸ' ಕಾಯಕದ ಮಹತ್ವ ತಿಳಿಸಿದೆ. 'ಕಾಯಕದಲ್ಲಿ ನಿರತನಾದಡೆ ಹರ ಬಂದರೂ ಮರೆಯಬೇಕು, ಗುರು ಬಂದರೂ ಮರೆಯಬೇಕು..' ಎಂದು ಕಾಯಕದ ಮಹತ್ವವನ್ನು ಹಲವು ವಚನಕಾರರು ತಮ್ಮ ವಚನಗಳಲ್ಲಿ ಹೇಳಿದ್ದಾರೆ.

-ರಾಜಶೇಖರ ಗೌಡ, ಕೊಟ್ಟೂರು

### ಅಪೂರ್ಣ ವಿಚಾರ ಲಹರಿ

ಸರ್ಕಾರಿ ನೌಕರರು ಹೆಚ್ಚು ಕಡಿಮೆ ಮೃಗಗಳಾಗಿದ್ದಾರೆ. ಇಂತಹವರನ್ನೇ ದೃಷ್ಟಿಯಲ್ಲಿಟ್ಟುಕೊಂಡು ಶಿಕಾಕು ವಿಚಾರಲಹರಿಯಲ್ಲಿ ಕಟಾಚಾರಕ್ಕೆ ಎಂಬಂತೆ ಬರೆದಿದ್ದಾರೆ. ಅತಿಯಾದ ಶ್ರದ್ಧೆ, ನಿಷ್ಠೆ, ಸಂಕಲ್ಪ ಇಟ್ಟುಕೊಂಡೇ ಕೆಲಸ ನಿರ್ವಹಿಸುವ ಎಷ್ಟೋ ಮಂದಿ ಬಗ್ಗೆ ಚಕಾರ ಎತ್ತಿಲ್ಲವಾದ್ದರಿಂದ, ಇದು ವಿಚಾರ ಲಹರಿ ಎನಿಸುವುದಿಲ್ಲ.

-ಶಂಕರೇಗೌಡ ತುಂಬಕೆರೆ, ಮಂಡ್ಯ

